- -　　　　　　　　　　　　　　　　ಓ ಎಸ್ ನಂ. 89/2019

ಪಿ.ಡಬ್ಲ್ಯೂ:2

ದಿನಾಂಕ : 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ**ಗಳ** ಪರ **ಶ್ರೀ ಡಿ ಜಿ** ವಕೀಲರಿಂದಃ

ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ವಿವರಗಳನ್ನು ನೀಡಿದ್ದೇನೆ . ಜಿ ಎ ಖಾದರ್ ಸಾಬ್ ನನ್ನ ತಂದೆ . ಜಿ ಎ ಖಾದರ್ ಸಾಬ್ ರವರಿಗೆ ನೀವು 9 ಜನ ವಾರಸುದಾರರು ಎಂದು ತೋರಿಸಲು ತಹಸೀಲ್ದಾರ್ ರವರು ದೃಢೀಕರಿಸಿರುವ ವಂಶವೃಕ್ಷವನ್ನು ಹಾಜರುಪಡಿಸಿದ್ದೀರಾ ಹಾಜರುಪಡಿಸಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ -17 ಮರಣ ಪ್ರಮಾಣ ಪತ್ರ ನನ್ನ ತಂದೆಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ . ನಿಪಿ -17 ರಲ್ಲಿ ಜಿ ಎ ಖಾದರ್ ಸಾಬ್ ಬಿನ್ ಜಿಯಾ ಖಾದರ್ ಸಾಬ್ ಎಂಬುದಾಗಿ ನಮೂದಿಸಲಾಗಿದೆ ಎಂದರೆ ಅದು ಸತ್ಯವಾಗಿದೆ ಎಂದು ತಿಳಿಸಿದ್ದಾರೆ . ನನ್ನ ತಾತನ ಹೆಸರು ಅಬ್ದುಲ್ ಖಾದರ್ ಸಾಬ್ ಎಂದರೆ ಸರಿ . ನಿಪಿ -17 ರಲ್ಲಿ ಅಬ್ದುಲ್ ಖಾದರ್ ಸಾಬ್ ಎಂಬ ಹೆಸರು ನಮೂದಿಸಿಲ್ಲ ಎಂದರೆ ಸಾಕ್ಷಿಯು ಆ ರೀತಿ ನಮೂದಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ , ಆದರೆ ನಿಪಿ -17 ನನ್ನ ತಂದೆಯ ಮರಣ ಪ್ರಮಾಣ ಪತ್ರ ಎಂದು ತಿಳಿಸಿದ್ದಾರೆ . 1 ರಿಂದ 16 ಮತ್ತು 18 ದಾಖಲೆಗಳನ್ನು ನನ್ನ ತಂದೆಗೆ ಬರೆದುಕೊಡುವ ಸಮಯ ಮಾರಾಟಗಾರರ ಹೆಸರಿನಲ್ಲಿ Khatha Extract ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ವಿದ್ಯಾವಂತ ರಾಗಿರಲಿಲ್ಲ ,ಕ್ರಯ ಪತ್ರ ಬರೆಸಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ . ನಿಪಿ -1 ಮತ್ತು 18 ರಲ್ಲಿ ಬರೆಯಲಾಗಿರುವ ಖಾನೆಷುಮಾರಿ ನಂಬರ್ ಗಳು ಒಂದೇ ಆಗಿರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ತಿಳಿಸಿದ್ದಾರೆ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ.